# ಪ್ರಾರಂಭದ ಪ್ರಾರ್ಥನೆ

## ಪ್ರಾರಂಭದ ಪ್ರಾರ್ಥನೆ

ಪ್ರಿಯ ಬಾಲಯೇಸುವೇ, ನಿಮ್ಮ ಕರಗಳು ನಮ್ಮನ್ನು ಸ್ವಾಗತಿಸಲು ಚಾಚಲಾಗಿವೆ. ನಮ್ಮನ್ನು ಆಶೀರ್ವದಿಸಲು ನಮ್ಮ ಮೇಲೆ ಹರಡಲಾಗಿದೆ. ನಿಮ್ಮನ್ನು ಆರಾಧಿಸಿ ಸ್ತುತಿಸುತ್ತಾ ಈ ಸಮಯವನ್ನು ನಿಮ್ಮ ಸನ್ನಿಧಿಯಲ್ಲಿ ಕಳೆಯಲು ಕೃಪೆನೀಡಿರಿ. ನೀವೇ ನಮ್ಮ ಪ್ರಭುವು ಹಾಗು ರಕ್ಷಕರು, ನೀವು ಸದಾ ನಮ್ಮನ್ನು ಪರಿಪಾಲಿಸುತ್ತೀರಿ. ನಮ್ಮನ್ನು ಪರಿಪಾಲಿಸುವುದರಿಂದ ನಮ್ಮ ಪ್ರಾರ್ಥನೆಗಳಿಗೆ ಕಿವಿಗೊಡಲು ನಮ್ಮ ಬಳಿ ಇರುವಿರಿ. ನಿಮ್ಮ ಶ್ರೇಷ್ಠ ಸಹಾಯವನ್ನು ನಮಗೆ ಸದಾ ನೀಡಬೇಕೆಂದು ಪಿತದೇವರೊಂದಿಗೆ ಪವಿತ್ರಾತ್ಮರ ಐಕ್ಯದಲ್ಲಿ ಯುಗಯುಗಾಂತರಕ್ಕೂ ಜೀವಿಸಿ ಆಳುವ ನಿಮ್ಮನ್ನು ದೈನ್ಯದಿಂದ ಪ್ರಾರ್ಥಿಸುತ್ತೇವೆ. ಆಮನ್.

## ನವೇನ ಪ್ರಾರ್ಥನೆ

ಅದ್ಭುತಶಾಲಿಯಾದ ಬಾಲಯೇಸುವೇ, ನಾವು ನಿಮ್ಮ ಪ್ರತಿಮೆಯ ಮುಂದೆ ಸಾಷ್ಟಾಂಗವಾಗಿ ಅಡ್ಡಬಿದ್ದು, ನಿಮ್ಮ ಸಹಾಯವನ್ನು ಯಾಚಿಸುತ್ತೇವೆ. ನೊಂದಿರುವ ನಮ್ಮ ಹೃನ್ಮನಗಳ ಮೇಲೆ ನಿಮ್ಮ ಕೃಪಾಕಟಾಕ್ಷವನ್ನು ಇರಿಸಿರಿ. ಪ್ರೀತಿಮಯ ಹಾಗೂ ಕರುಣಾಭರಿತ ಹೃದಯವುಳ್ಳ ನೀವು ನಮ್ಮ ದೀನ ಪ್ರಾರ್ಥನೆಗಳಿಂದ ಮನಕರಗಿ ನಾವು ಭಕ್ತಿಯಿಂದ ಕೋರುವ ವರಗಳನ್ನು ದಯಪಾಲಿಸಿರಿ.

**(ವೈಯಕ್ತಿಕ ಕೋರಿಕೆಗಳನ್ನು ಇಲ್ಲಿ ನಿವೇದಿಸಬಹುದು)**

ನಮಗೆ ಉಂಟಾಗಿರುವ ಅಧೈರ್ಯವನ್ನು ತೊಲಗಿಸಿರಿ, ನಮಗೆ ಬಂದೊದಗಿರುವ ಕಷ್ಟ ಕಾರ್ಪಣ್ಯಗಳನ್ನು ದೂರಮಾಡಿರಿ. ನಿಮ್ಮ ಪವಿತ್ರ ಬಾಲ್ಯದ ನಿಮಿತ್ತ ನಮ್ಮ ಪ್ರಾರ್ಥನೆಗಳನ್ನು ಆಲಿಸಿ ಉಪಕಾರವನ್ನೂ ಉಪಶಮನವನ್ನೂ ನೀಡಿರಿ. ನಿಮ್ಮ ಸಹಾಯವನ್ನು ಪಡೆದು ಧನ್ಯರಾದ ನಾವು ಪಿತನೊಂದಿಗೂ ಪವಿತ್ರಾತ್ಮರೊಂದಿಗೂ ಸದಾ ಕಾಲಕ್ಕೂ ನಿಮ್ಮನ್ನು ಸ್ತುತಿಸುವೆವು. ಆಮೆನ್.

## ಬಲಿಪೂಜೆಯ ಸದುದ್ದೇಶ

ಪ್ರಿಯ ಪುಟ್ಟ ಬಾಲಯೇಸುವೇ, ಪರಲೋಕದ ತಂದೆಯನ್ನು ನಮ್ಮ ತಂದೆಯೆಂದು ಕರೆಯಲು ನಮಗೆ ಬೋಧಿಸಿದ್ದೀರಿ. ಆ ತಂದೆಯ ಮಹಿಮೆಗಾಗಿ ನಿಮ್ಮೊಂದಿಗೆ ನಾವು ಈ ಬಲಿಪೂಜೆಯನ್ನು ಅರ್ಪಿಸುತ್ತೇವೆ. ನಿಮ್ಮೊಂದಿಗೆ ನಮ್ಮೆಲ್ಲರನ್ನು ಆ ಪರಮ ತಂದೆಗೆ ಸುಗಂಧ ಬಲಿ ಕಾಣಿಕೆಯಾಗಿ ಅರ್ಪಿಸುತ್ತೇವೆ. ನಮಗಾಗಿಯೂ ವಿಶ್ವದ ಸರ್ವ ಜನರಿಗಾಗಿಯೂ ಈ ಬಲಿಪೂಜೆಯನ್ನು ಸಮರ್ಪಿಸುತ್ತೇವೆ.